# <u>1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ರಾಯಚೂರು</u>

**ದಿನಾಂಕ 21ನೇ ಜುಲೈ 2026**

ಉಪಸ್ಥಿತರು: ಶ್ರೀಮತಿ ಮಾಲ ಎನ್.ಡಿ.

ಬಿಎಎಲ್., ಎಲ್‌ಎಲ್.ಎಂ,

**1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ರಾಯಚೂರು.**

**<u>ಎಸ್ ಸಿ ನಂ.67/2024</u>**

| | |
|---|---|
| ಪಿರ್ಯಾದುದಾರ | ರಾಜ್ಯದ ಪರವಾಗಿ |
| | ಮಾನವಿ ಪೊಲೀಸ್ ಠಾಣೆ ರಾಯಚೂರು |
| | ವಿರುದ್ದ |
| ಆರೋಪಿತನ ಹೆಸರು | ಹುಲಿಗೇಪ್ಪ (**A**1) |
| ತಂದೆಯ ಹೆಸರು | ಅಮರೇಶ |
| ವಯಸ್ಸು | 42 ವರ್ಷ |
| ವಿಳಾಸ | ರಬ್ಬಣಕಲ್, ತಾಃ ಮಾನವಿ |

## <u>ಭಾ.ನ್ಯಾ.ಸು.ಸಂ.ಕಲಂ.351 ರಡಿಯಲ್ಲಿ ಆರೋಪಿತನ ಹೇಳಿಕೆ</u>

**ಪ್ರಶ್ನೆಃ1** ನ್ಯಾಯಾಲಯದ ಮುಂದೆ ವಿಚಾರಣೆಯಾದ ಅಭಿಯೋಜನ ಪರ ಸಾಕ್ಷಿದಾರರ ಸಾಕ್ಷ್ಯದ ಹೇಳಿಕೆಗಳನ್ನು ನೀವು ಕೇಳಿದ್ದೀರಾ ?

ಉತ್ತರ : ಹೌದು

**ಪ್ರಶ್ನೆಃ 2:** ಪ್ರಾಸಾ.9 ವೆಂಕಟೇಶಲು (ಎ.ಎಸ್.ಐ) ರವರು ತಮ್ಮ ಸಾಕ್ಷ್ಯದಲ್ಲಿ ದಿಃ 12-12-2022 ರಂದು, ಸಂಜೆ 6-30 ತಾವು ಠಾಣಧಿಕಾರಿಯಾಗಿದ್ದಾಗ ಚಾಸಾ-1 ರವರು ಠಾಣೆಗೆ ಹಾಜರಾಗಿ ಕನ್ನಡದ ಗಣಕೀಕೃತ ದೂರೊಂದನ್ನು ನೀಡಿದ್ದು, ಸದರಿ ದೂರನ್ನು ಪರಿಶೀಲಿಸಿ ಠಾಣಾ ಮೊಕದ್ದಮೆ ಸಂಖ್ಯೆಃ 267/2022 ರಂತೆ ಈ ಪ್ರಕರಣವನ್ನು ದಾಖಲಿಸಿ ನ್ಯಾಯಾಲಯಕ್ಕೆ ಮತ್ತು ತಮ್ಮ ಮೇಲಾಧಿಕಾರಿಗಳಿಗೆ ಪ್ರಥಮ ವರ್ತಮಾನ ವರದಿಯನ್ನು ನಿವೇದಿಸಿಕೊಂಡಿದ್ದು, ಸದರಿ ದೂರನ್ನು ನಿಪಿ-1 ಎಂದು, ತಮ್ಮ ಸಹಿಯನ್ನು ನಿಪಿ-1(ಬಿ) ಎಂದು, ಪ್ರಥಮ ವರ್ತಮಾನ ವರದಿಯನ್ನು ನಿಪಿ-11 ಎಂದು ಮತ್ತು ತಮ್ಮ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಿದರೆಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನು ಹೇಳುತ್ತೀರಾ?

**ಉತ್ತರಃ** ಸುಳ್ಳು

**ಪ್ರಶ್ನೆಃ 3:** ಪ್ರಾಸಾ.9 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ನಂತರ ದಿಃ 13-12-2022 ರಂದು, ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಚಾಸಾ-1 ರವರು ಸ್ಥಳ ತೋರಿಸಿದಂತೆ, ಪಂಚರಾದ ಚಾಸಾ-2 ಮತ್ತು 3 ರವರ ಸಮಕ್ಷಮ ಬೆಳಿಗ್ಗೆ 10 ರಿಂದ 11 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿ, ಸ್ಥಳದಲ್ಲಿದ್ದ ಒಂದು ದೊಣ್ಣೆಯನ್ನು ಅಮಾನತ್ತು ಪಡಿಸಿಕೊಂಡಿದ್ದು ಅದನ್ನು ನಿಪಿ-2 ಎಂದು, ತಮ್ಮ ಸಹಿಯನ್ನು ನಿಪಿ-2(ಬಿ) ಎಂದು, ನ್ಯಾಯಾಲಯದಲ್ಲಿ

ಹಾಜರುಪಡಿಸಿರುವ ದೊಣ್ಣೆಯನ್ನು ಮು.ಮಾ. 1 ಎಂದು ಗುರುತಿಸಿದ್ದು, ನಂತರ ಅದೇ ದಿನ ಅಮಾನತ್ತು ಪಡಿಸಿಕೊಂಡ ಮು.ಮಾ. 1 ನ್ನು ಠಾಣಾ ಮಾಲುಪಟ್ಟಿ ಸಂಖ್ಯೆಃ 160/2022 ರಂತೆ ಅಳವಡಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿದರೆಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನು ಹೇಳುತ್ತೀರಾ ?

ಉತ್ತರಃ ಸುಳ್ಳು

**ಪ್ರಶ್ನೆಃ 4:** ಪ್ರಾ.ಸಾ.9 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಅದೇ ದಿನ ಚಾಸಾ-1 ರವರ ಮುಂದುವರೆದ ಹೇಳಿಕೆ, ಚಾಸಾ-6 ರಿಂದ 10 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿದ್ದು, ದಿಃ 11-01-2023 ರಂದು, ಚಾಸಾ-4, 5 ಮತ್ತು 7 ರವರ ಹೇಳಿಕೆಗಳನ್ನು ದಾಖಲಿಸಿಕೊಂಡರೆಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನು ಹೇಳುತ್ತೀರಾ ?

**ಉತ್ತರಃ** ಸುಳ್ಳು

**ಪ್ರಶ್ನೆಃ 5:** ಪ್ರಾಸಾ.9ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕ 21-01-2021 ರಂದು ಆರೋಪಿಗಳು ನಿರೀಕ್ಷಣಾ ಜಾಮೀನನ್ನು ಪಡೆದುಕೊಂಡು ಬಂದಿದ್ದು, ನ್ಯಾಯಾಲಯದ ಆದೇಶದಂತೆ ಸದರಿಯವರಿಂದ ಮುಚ್ಚಳಿಕೆ ಪತ್ರ ಪಡೆದುಕೊಂಡು ಬಿಡುಗಡೆಗೊಳಿಸಿದ್ದು ನಂತರ ನ್ಯಾಯಾಲಯದಲ್ಲಿ

ಹಾಜರಿರುವ ಆರೋಪಿತರ ವಿರುದ್ಧದ ಆರೋಪ ಮೇಲ್ನೋಟಕ್ಕೆ ತನಿಖೆಯಲ್ಲಿ ಸಾಬೀತಾಗಿದ್ದರಿಂದ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದರೆಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನು ಹೇಳುತ್ತೀರಾ ?

**ಉತ್ತರಃ** ಸುಳ್ಳು

**ಪ್ರಶ್ನೆಃ** 6 : ಈ ಕೇಸಿನ ಬಗ್ಗೆ ನಿಮಗೆ ಏನಾದರೂ ಹೇಳುವುದು ಇದೆಯೇ ?

**ಉತ್ತರಃ** ಇಲ್ಲ

**ಪ್ರಶ್ನೆಃ** 7 : ನಿಮ್ಮ ಪರವಾಗಿ ಯಾವುದಾದರೂ ಸಾಕ್ಷಿದಾರರ ವಿಚಾರಣೆ ಮಾಡಿಸುತ್ತೀರಾ ?

**ಉತ್ತರಃ** ಇಲ್ಲ

(ಈ ದಿನ ದಿನಾಂಕ **21-07-2026** ರಂದು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ವಿವರಿಸಿ ಅವರು ಹೇಳಿದ ಹಾಗೆ ಅವರ ಹೇಳಿಕೆಯನ್ನು ಪಡೆದುಕೊಳ್ಳಲಾಗಿದೆ ಮತ್ತು ಪಡೆದುಕೊಂಡ ಹೇಳಿಕೆ ಸರಿಯಾಗಿದೆಯೆಂದು ಧೃಡೀಕರಿಸಿದ್ದೇನೆ).

**(ಮಾಲ ಎನ್.ಡಿ.)**
**1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ರಾಯಚೂರು.**